## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## S.C. No. 241/2023

**ಸಾಕ್ಷಿಯನ್ನು ದಿನಾಂಕ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಮಲಕುಮಾರ | ಪಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ವಿನೋದಕುಮಾರ | ಸಿ.ಡಬ್ಲ್ಯೂ-15 |
| ವಯಸ್ಸು | : | 34 | |
| ಉದ್ಯೋಗ | : | ಕೋಆಪರೇಟಿವ್ ಇಲಾಖೆ ಕೆಲಸ | |
| ವಾಸ ಸ್ಥಳ | : | ಆನಂದನಗರ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

ಚಾಸ 14 ನನ್ನ ಹೆಂಡತಿ ಇರುತ್ತಾರೆ. ಚಾಸ 12 ಮತ್ತು 13 ನನ್ನ ಹೆಂಡತಿಯ ಅಕ್ಕ ಮತ್ತು ಅವರ ಗಂಡ ಇರುತ್ತಾರೆ. ಚಾಸ 1 ಮತ್ತು 7 ನನ್ನ ಹೆಂಡತಿಯ ತಂದೆ ತಾಯಿ ಇರುತ್ತಾರೆ. ಚಾಸ 12 ಮತ್ತು 13 ನನ್ನ ಹೆಂಡತಿಯ ಅಕ್ಕ ಮತ್ತು ಭಾವ. ಚಾಸ 15 ನನ್ನ ಹೆಂಡತಿಯ ಅಕ್ಕನ ಗಂಡ ಇರುತ್ತಾರೆ. ಮೃತ ಪಲ್ಲವಿ ನನ್ನ ಹೆಂಡತಿಯ ತಂಗಿ ಇರುತ್ತಾಳೆ. ಚಾಸ 17 ರಿಂದ 19 ನನ್ನ ಹೆಂಡತಿಯ ಸೋದರ ಮಾವಂದಿರಿದ್ದು, ಚಾಸ 20 ನನ್ನ ಹೆಂಡತಿಯ ಮಾವನ ಮಗನಿರುತ್ತಾನೆ. ಚಾಸ 11 ವೈಭವ್ ನನ್ನ ಹೆಂಡತಿಯ ತಂಗಿ ಪಲ್ಲವಿಯ ಮಗನಿರುತ್ತಾನೆ. ನ್ಯಾಯಾಲಯದ ಮುಂದಿರುವ

ಆರೋಪಿ ನನ್ನ ಹೆಂಡತಿಯ ತಂಗಿ ಪಲ್ಲವಿಯ ಗಂಡನಿರುತ್ತಾನೆ. ನನ್ನ ಮದುವೆ 31.7.2022 ರಂದು ಆಗಿರುತ್ತದೆ. ನನ್ನ ಮದುವೆಗಿಂತ ಮುಂಚೆ ನನ್ನ ಹೆಂಡತಿಯ ತಂಗಿ ಪಲ್ಲವಿಯ ಮದುವೆಯಾಗಿತ್ತು. ಮದುವೆ ಬಳಿಕ ನಾನು ನನ್ನ ಹೆಂಡತಿ ಜೊತೆ ಮೈಸೂರಿನ ಬೋಗಾದಿಯಲ್ಲಿ ವಾಸವಿದ್ದೆ. ನಾನು ಹೆಚ್ಚಾಗಿ ನನ್ನ ಹೆಂಡತಿಯ ತಂಗಿ ಮನೆ ಕಡೆಗೆ ಹೋಗುತ್ತಿರಲಿಲ್ಲ. ನನ್ನ ಹೆಂಡತಿಯ ತಂಗಿ ಪಲ್ಲವಿ ಹಾಗೂ ಅವಳ ಗಂಡ ನನ್ನ ಮದುವೆ ಕಾಲಕ್ಕೆ ಮೈಸೂರಿನ ನಾಡನಹಳ್ಳಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನನ್ನ ಅತ್ತೆಯ ಅಣ್ಣ ಅವರಿಗೆ ಕೆ.ಎಸ್.ಆರ್.ಟಿ.ಸಿ ಬಡಾವಣೆಯಲ್ಲಿ ಮನೆ ಮಾಡಿಕೊಟ್ಟಿದ್ದರು ಎಂದು ಹೇಳಿದ್ದರು.

ದಿನಾಂಕ 14.6.2023 ರಂದು ಬೆಳಿಗ್ಗೆ 7.30 ಕ್ಕೆ ನನ್ನ ಹೆಂಡತಿಗೆ ಅವರ ಸಂಬಂಧಿ ಮೇಘ ಎಂಬುವವರು ಫೋನ್ ಮಾಡಿ ಪಲ್ಲವಿಯ ಗಂಡ ಕೊಲೆ ಮಾಡಿದ್ದಾನೆ ಎಂದು ಹೇಳಿದರು. ಆಗ ನಾನು ಮತ್ತು ನನ್ನ ಹೆಂಡತಿ ವರುಣ ಗ್ರಾಮದ ನನ್ನ ಅತ್ತೆ ಮನೆಗೆ ಹೋಗಿದ್ದೆವು. ಆ ಕಾಲಕ್ಕೆ ನನ್ನ ಹೆಂಡತಿಯ ಅಕ್ಕ ಗರ್ಭಿಣಿ ಇದುದ್ದರಿಂದ ನನ್ನ ಹೆಂಡತಿಯನ್ನು ವರುಣದಲ್ಲಿ ಬಿಟ್ಟು ನಾಗಭೂಷಣ ಇವರಿಗೆ ಫೋನ್ ಮಾಡಿ ಲೊಕೆಶನ್ ತೆಗೆದುಕೊಂಡು ಬೆಳಿಗ್ಗೆ ಅಂದಾಜು 8.30 ಗಂಟೆಗೆ ನಾನು ಪಲ್ಲವಿ ಮನೆಗೆ ಹೋದೆನು. ಆ ಕಾಲಕ್ಕೆ ಅಲ್ಲಿ ನನ್ನ ಅತ್ತೆ, ಮಾವ ಹಾಗೂ ಅವರ ಸಂಬಂಧಿಕರು ಅಲ್ಲಿದ್ದರು. ನಾನು ನೋಡಿದಾಗ ಪಲ್ಲವಿಯ ಶವ ಆ ಮನೆಯ

ಹಾಲ್‌ನಲ್ಲಿತ್ತು. ಪಲ್ಲವಿಯ ಕತ್ತಿನಲ್ಲಿ ಕಪ್ಪು ಗುರುತು ಇತ್ತು, ಮುಖ ಹಾಗೂ ತುಟಿಗೆ ತರಚಿದ ಗಾಯವಾಗಿತ್ತು. ಪಲ್ಲವಿಯ ಮರಣ ಹೊಂದುವ 15 ದಿನ ಮೊದಲು ಪಲ್ಲವಿ ಮತ್ತು ಅವರ ಗಂಡನ ನಡುವೆ ಗಲಾಟೆಯಾಗಿದ್ದ ಬಗ್ಗೆ ನನ್ನ ಹೆಂಡತಿ ನನಗೆ ಹೇಳಿದ್ದಳು. ಆದರೆ ನನಗೆ ಹೊಸದಾಗಿ ಮದುವೆಯಾದ್ದರಿಂದ ನಾನು ಆ ವಿಷಯಕ್ಕೆ ತಲೆ ಹಾಕಲು ಹೋಗಿರುವುದಿಲ್ಲ. ಪಲ್ಲವಿಯನ್ನು ಅವರ ಗಂಡನೆ ಕೊಲೆ ಮಾಡಿದ್ದಾನೆ ಎಂದು ಗೊತ್ತಾಯಿತು. ದಿನಾಂಕ 17.7.2023 ರಂದು ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು